ಆಧಾರಿತ, ಸರ್ಕಾರೇತರ ಸಂಸ್ಥೆಯಾದ 'ದಿ ಆರ್ಟ್ ಆಫ್ ಲಿವಿಂಗ್' ನ ಟ್ರಸ್ಟಿಗಳು ಮತ್ತು ಇತರ ವ್ಯಕ್ತಿಗಳು, ಸರ್ಕಾರಿ ಗುತ್ತಿಗೆ (ಲೀಸ್) ಹಾಗೂ "ಮಂಜೂರಾತಿ ಪಡೆದವರೊಂದಿಗೆ" ಒಪ್ಪಂದಗಳ ಮೂಲಕ (ಸಂಶಯಾಸ್ಪದ ಮಂಜೂರಾತಿ ದಾಖಲೆಗಳನ್ನೊಳಗೊಂಡಂತೆ) 290 ಎಕರೆಗೂ ಹೆಚ್ಚು ಸರ್ಕಾರಿ 'ಗೋಮಾಳ ಜಮೀನನ್ನು' ವ್ಯವಸ್ಥಿತವಾಗಿ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಒತ್ತುವರಿ ಮಾಡಿರುವುದು ಕಂಡುಬರುತ್ತದೆ. ಈ ಪೈಕಿ ಯಾರೊಬ್ಬರೂ ಸದರಿ ಆಪಾದಿತ ಮಂಜೂರಾತಿಯ ಮೂಲ ಉದ್ದೇಶವನ್ನು ನಿರ್ವಹಿಸುತ್ತಿಲ್ಲ. ಸರ್ಕಾರದಿಂದ ಗುತ್ತಿಗೆ ಪಡೆದ ಜಮೀನಿನ ವ್ಯಾಪ್ತಿಯನ್ನು ಮೀರಿ ತನ್ನ ನಿಯಂತ್ರಣವನ್ನು ವಿಸ್ತರಿಸಿಕೊಳ್ಳಲು ಈ ಸಂಸ್ಥೆಯು ಮಾಡಿರುವ ಒತ್ತುವರಿಯ ಕುರಿತು ದೂರುಗಳು ಸ್ವೀಕೃತವಾಗಿವೆ. ಆ ದೂರುಗಳು ಈ ಕೆಳಕಂಡ ಕಾರ್ಯವಿಧಾನಗಳನ್ನು ಒಳಗೊಂಡಿವೆ:

(ಎ) ಖಾಸಗಿ ಜಮೀನು ಮಾಲೀಕರನ್ನು ವಿವಿಧ ಗುತ್ತಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವಂತೆ ಪ್ರೇರೇಪಿಸುವುದು.

(ಬಿ) "ಮಂಜೂರಾತಿ ಪಡೆದವರಿಂದ" (ನೈಜ ಮತ್ತು ಕಾಲ್ಪನಿಕ) ಜಮೀನಿನ ಭಾಗಗಳನ್ನು ದಾನಪತ್ರದ ಮೂಲಕ ಪಡೆಯುವುದು ಅಥವಾ ಒಪ್ಪಂದಗಳನ್ನು ಮಾಡಿಕೊಳ್ಳುವುದು.

(ಸಿ) ಇತರೆ ಟ್ರಸ್ಟ್‌ಗಳು ಮತ್ತು ಪ್ರತಿಷ್ಠಾನಗಳ ಮೂಲಕ ಪರೋಕ್ಷವಾಗಿ ಕಾರ್ಯನಿರ್ವಹಿಸುವುದು.

ಖಾಸಗಿ ವ್ಯಕ್ತಿಗಳು ಸಲ್ಲಿಸಿದ ಇತ್ತೀಚಿನ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಂಖ್ಯೆ 15264/2023 (ಕೆಎಲ್‌ಆರ್-ಆರ್‌ಇಎಸ್-ಪಿಐಎಲ್)ರಲ್ಲಿ, ಇತರೆ ಪ್ರತಿವಾದಿಗಳೊಂದಿಗೆ ಮುಖ್ಯವಾಗಿ ಈ ಮುಂದಿನವರ ವಿರುದ್ಧ ಎಂದರೆ, (1) ಶ್ರೀ ರವಿಶಂಕರ್ ಗುರೂಜಿ, ಆರ್ಟ್ ಆಫ್ ಲಿವಿಂಗ್ ಆಶ್ರಮ, ಉದಯಪುರ ಗ್ರಾಮ, (2) ಶ್ರೀ ರಘು ಅವಧಾನಿ, ಆರ್ಟ್ ಆಫ್ ಲಿವಿಂಗ್ ಇಂಟರ್ನ್ಯಾಷನಲ್ ಸೆಂಟರ್, ಉದಯಪುರ ಗ್ರಾಮ, (3) ಶ್ರೀ ದಿಗ್ವಿಜಯ ಚೌಧರಿ, ಆರ್ಟ್ ಆಫ್ ಲಿವಿಂಗ್ ಇಂಟರ್ನ್ಯಾಷನಲ್ ಸೆಂಟರ್, ಉದಯಪುರ ಗ್ರಾಮ (4) ಶ್ರೀ ಉತ್ತಮಚಂದ್ ಭಂಡಾರಿ, ಆರ್ಟ್ ಆಫ್ ಲಿವಿಂಗ್ ಇಂಟರ್ನ್ಯಾಷನಲ್ ಸೆಂಟರ್, ಉದಯಪುರ ಗ್ರಾಮ ಮತ್ತು (5) ಗ್ರಾಮೀಣಾಭಿವೃದ್ಧಿ ಮಂತ್ರಾಲಯದಡಿ ನೋಂದಾಯಿತವಾಗಿರುವ 'ಆರ್ಟ್ ಆಫ್ ಲಿವಿಂಗ್'ನ ವಾಣಿಜ್ಯ ಬೆಂಬಲ ಕೇಂದ್ರವಾದ ಮೆಸರ್ಸ್ ಸುಮೇರು ಗ್ಲೋಬಲ್ ಸಪೋರ್ಟ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್, ತುಳಸಿ ಹಾಲ್, ಗೇಟ್ ನಂ. 2ರ ಎದುರು, ಸಂಖ್ಯೆ: 2, ಆರ್ಟ್ ಆಫ್ ಲಿವಿಂಗ್ ಇಂಟರ್ನ್ಯಾಷನಲ್ ಸೆಂಟರ್ ಇವರ ವಿರುದ್ಧ ದಾಖಲಿಸಲಾಗಿದ್ದು, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿಯ ಕಗ್ಗಲೀಪುರ ಗ್ರಾಮದ ಸರ್ವೆ ನಂ. 160, 164/1, 164/2, 150 ಮತ್ತು 137 ರಲ್ಲಿರುವ ಸರ್ಕಾರಿ ಜಮೀನು, ಕೆರೆ ಹಾಗೂ ರಾಜಕಾಲುವೆಗಳನ್ನು ಒತ್ತುವರಿ ಮಾಡಿ ಮೇಲ್ಕಂಡ 1 ರಿಂದ 5